ಊ) ಹೌದು ಯಂತ್ರಗಳ ಕಾವಲಿಗಾಗಿ ಅಲ್ಲಿ ಭದ್ರತಾ ಸಿಬ್ಬಂದಿಗಳನ್ನು ನೇಮಿಸಲಾಗಿದೆ.

ಋ) ಮತ್ತು ಎ) ಇಲ್ಲಿನ ಕಟ್ಟಡಗಳನ್ನು ಸೂಕ್ತವಾಗಿ ಬಳಸಿಕೊಳ್ಳುವುದಕ್ಕೆ ಕೆಲವು ಪ್ರಸ್ತಾವನೆಗಳು ಬಂದಿದ್ದು, ಈ ಬಗ್ಗೆ ಪರಿಶೀಲಿಸಲಾಗುತ್ತಿದೆ

ಸಾರ್ವಜನಿಕ ಗ್ರಂಥಾಲಯ

325(276); ಶ್ರೀ ಗೋಪಾಲಯ್ಯ ಕೆ (ಮಹಾಲಕ್ಷ್ಮಿ ಲೇಔಟ್)

ಅ) ಬೆಂಗಳೂರು ನಗರದಲ್ಲಿರುವ ಸಾರ್ವಜನಿಕ ಗ್ರಂಥಾಲಯಗಳೆಷ್ಟು,

ಆ) ಈ ಗ್ರಂಥಾಲಯಗಳಲ್ಲಿ ಹೆಚ್ಚಿನ ಪುಸ್ತಕಗಳು ಹಾಗೂ ಇತರ ಮೂಲಭೂತ ಸೌಲಭ್ಯ ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು,

ಇ) ಈ ಗ್ರಂಥಾಲಯಗಳಿಗೆ ಬೆಂಗಳೂರು ಮಹಾನಗರ ಪಾಲಿಕೆಯಿಂದ ಬರಬೇಕಾದ ಸೆಸ್ ಬಾಕಿ ಹಣವೆಷ್ಟು,

ಈ) ಸೆಸ್ ಹಣವನ್ನು ವಸೂಲು ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಕಿಮ್ಮನೆ ರತ್ನಾಕರ್ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) **237**

ಆ) ನಗರ ಕೇಂದ್ರ ಗ್ರಂಥಾಲಯ ಪ್ರಾಧಿಕಾರ ಅಡಿಯಲ್ಲಿ ಗ್ರಂಥಗಳ ಖರೀದಿಗೆ ಹಂಚಿಕೆ ಮಾಡಲಾದ ಮೊತ್ತದಲ್ಲಿ ಪುಸ್ತಕಗಳನ್ನು ಖರೀದಿಸಿ ಆಯಾ ಗ್ರಂಥಗಳಿಗೆ ವಿತರಿಸಲಾಗುತ್ತದೆ. ಬೆಂಗಳೂರು ನಗರದ ಬಿ ಬಿ ಎಂ ಪಿ ಅಡಿಯಲ್ಲಿ ಬಿ ಡಿ.ಎ ಮುಖಾಂತರ 8 ನಿವೇಶನಗಳನ್ನು ವಡಯಲಾಗಿದೆ ಹಾಗೂ ಇವುಗಳಲ್ಲಿ ಕಲ್ಯಾಣನಗರ ಹಾಗೂ ಬಿ ಟಿ ಎಂ ಲೇಔಟನ ಕಟ್ಟಡ ನಿಮಾಣ ಕಾರ್ಯವನ್ನು ಕೈಗೊಳ್ಳಲಾಗಿದೆ

ಇ) ಅಂದಾಜು ₹ 146.00 ಕೋಟಿ

ಈ) ಸರ್ಕಾರದ ಅರೆ ಸರ್ಕಾರಿ ಪತ್ರ ಸಂಖ್ಯೆ: ಇಡಿ 221 ಎಲ್‌ಐಬಿ 2011 ದಿ 14/7/2011ರಲ್ಲಿ ಗ್ರಂಥಾಲಯ ಕರ ಪಾವತಿಸುವಂತೆ ಸರ್ಕಾರದ ಪ್ರಧಾನ ಕಾರ್ಯದರ್ಶಿ ನಗರಾಭಿವೃದ್ಧಿ ಇಲಾಖೆ ಇವರಿಗೆ ಪತ್ರ ಬರೆಯಲಾಗಿದೆ. ಹಾಗೂ ಮಾನ್ಯ ಶಿಕ್ಷಣ ಸಚಿವರು ಟಿಪ್ಪಣಿ ಸಂಖ್ಯೆ ಪ್ರಾಪ್ರೌಶಿಸ/3974–14 ದಿ 31/10/2013ರಲ್ಲಿ ಪೂಜ್ಯ ಮಹಾಪೌರರು ಮತ್ತು ಆಯುಕ್ತರು, ಬಿ ಬಿ.ಎಂ ಪಿ ಬೆಂಗಳೂರು ಇವರುಗಳನ್ನು ಕೋರಲಾಗಿದೆ.

ಸುವರ್ಣ ಗ್ರಾಮ ಯೋಜನೆ

433(360); ಶ್ರೀ ತಮ್ಮಣ್ಣ ಡಿ.ಪಿ. (ಮದ್ದೂರು)

ಅ) 2013–14ನೇ ಸಾಲಿನ ಆಯವ್ಯಯದ ಮೇಲಿನ ಚರ್ಚೆಗೆ ಉತ್ತರಿಸುವಾಗ ಮಾನ್ಯ ಮುಖ್ಯ ಮಂತ್ರಿಗಳು ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆಯನ್ನು ಮುಂದುವರೆಸುವ ಕುರಿತು ಹೇಳಿಕೆ ನೀಡುರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಮೇಲ್ಕಂಡ ಯೋಜನೆಯನ್ನು 2013–14ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ;

ಇ) ಹಾಗಿದ್ದಲ್ಲಿ, ಈ ಯೋಜನೆಯನ್ನು ಅನುಷ್ಠಾನ ಗೊಳಿಸಲು ಯಾವಾಗ ಸರ್ಕಾರದ ಆದೇಶ ಹೊರಡಿಸಲಾಗುತ್ತಿದೆ?

ಶ್ರೀ ಎಚ್.ಕೆ ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಸಚಿವರು)

ಅ) ಬಂದಿದೆ

ಆ) **ಮತ್ತು** ಇ) ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆ ಹಂತ–2 ರ ಕಾರ್ಯಕ್ರಮವನ್ನು ಸರ್ಕಾರದ ಆದೇಶ ಸಂ· ಗ್ರಾಅಪ·241:ಎಎಫ್‌ಎನ್ 2013 ದಿ 01–08–2013 ರಲ್ಲಿ 2013–14ನೇ ಸಾಲಿಗೆ ಮುಂದುವರೆಸಲಾಗಿದೆ